**ಓ.ಎಸ್. ನಂ. 403/2018 ಪಿ.ಡಬ್ಲೂ-2 ಹೆಸರು - ಮಲ್ಲಯ್ಯ**

**ಸಾಕ್ಷಿಯನ್ನು ದಿನಾಂಕಃ 21/06/2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಂ.ಪಿ.ಟಿ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು ಮೂಲತಃ ಚಿನ್ನದಗುಡಿಹುಂಡಿ ಗ್ರಾಮದವನು. ನಾನು 2 ½ ಎಕರೆ ಜಮೀನು ಹೊಂದಿದ್ದು ವ್ಯವಸಾಯ ಮಾಡಿಕೊಂಡಿದ್ದೇನೆ. ವಾದಿ ಹಾಗೂ ನಾನು ಒಂದೇ ಊರಿನಲ್ಲಿ ಬೇರೆ ಬೇರೆ ಬೀದಿಯಲ್ಲಿ ವಾಸವಿದ್ದೇವೆ. ವಾದಿಯು ರೈತರು ಎಂದರೆ ಸರಿ. ಅವರು ವ್ಯವಸಾಯದಿಂದಲೇ ಜೀವನ ಮಾಡುತ್ತಿದ್ದಾರೆ ಎಂದರೆ ಸರಿ. ಅವರು ಸಹ 2 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ ಎಂದರೆ ಸರಿ. ವಾದಿಯ ಜಮೀನು ವೀರದೇವನಪೂರ ಎಲ್ಲೆಯಲ್ಲಿ ಹಾಗೂ ನನ್ನ ಜಮೀನು ಮೂಳ್ಳೂರು ಎಲ್ಲೆಯಲ್ಲಿ ಇದೆ. ನಾನು ವಾದಿ ಒಂದೇ ಜನಾಂಗದವರಾಗಿದ್ದು ಸಂಬಂಧಿಕರಲ್ಲ. ಪ್ರತಿವಾದಿಯು ನಮ್ಮ ಊರಿನಲ್ಲಿಯೇ ವಾಸವಿದ್ದಾರೆ. ನಮ್ಮ ಜನಾಂಗದವರು ನಮ್ಮ ಊರಿನಲ್ಲಿ ಅಂದಾಜು ಎರಡೂವರೆ ಸಾವಿರ ಜನ ಇದ್ದೇವೆ. ಪ್ರತಿವಾದಿ ಜನಾಂಗದವರು 150-200 ಜನ ಇದ್ದಾರೆ. ನಮ್ಮ ಗ್ರಾಮದಲ್ಲಿ ನಮಗೆ ಪಿತ್ರಾರ್ಜಿತವಾದಂತ 8 ಕಂಬದ ತೊಟ್ಟಿ ಮನೆ ಇದೆ. ಅದನ್ನು ಹೊರತುಪಡಿಸಿ ನನಗೆ ಯಾವುದೇ ಮನೆ ಇಲ್ಲ. ವಾದಿಯದ್ದು 8 ಕಂಬದ ತೊಟ್ಟಿ ಮನೆಯಲ್ಲಿ ಅರ್ಧ ಮನೆ ಇದೆ. ವಾದಿಯು ಇದ್ದಂತ ಮನೆ ಬಿದ್ದು ಹೋಗಿದ್ದು, ಎದುರುಗಡೆಯ ತಾರಸಿ ಮನೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿ ಸೀಟಿನ ಮನೆಯಲ್ಲಿ ಇದ್ದಾರೆ ಎಂದು ನುಡಿಯುವರು. ವಾದಿಯ ಹಳೆ ಮನೆ ಬಿದ್ದು ಸುಮಾರು 7-8 ವರ್ಷ ಆಗಿದೆ. ಪ್ರತಿವಾದಿಗಳು ವಾದಿಯ ಸೈಟಿನಲ್ಲಿ ವಾಸವಿದ್ದಾರೆ. ಸಾಕ್ಷಿ ಮುಂದುವರೆ 3 ಅಡಿ ಒತ್ತುವರಿ ಮಾಡಿಕೊಂಡಿದ್ದಾರೆ ಎನ್ನುವರು. ಪ್ರತಿವಾದಿಗಳು ವಾಸವಿರುವ ಮನೆಯನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿದ್ದು ಅದು ಪ್ರತಿವಾದಿಯ ಮನೆ ಎಂದು ಗುರುತಿಸಿದ್ದು, ಅದನ್ನು ಈಗಾಗಲೇ ನಿಡಿ-1 ಎಂದು ಗುರುತಿಸಲಾಗಿದೆ. ನಿಡಿ-1 ರಲ್ಲಿ ಕಾಣಿಸುವ ವ್ಯಕ್ತಿ 2 ನೇ ಪ್ರತಿವಾದಿಗಳಾಗಿರುತ್ತಾರೆ. ಪ್ರತಿವಾದಿಯು ಎಷ್ಟು ಅಡಿ ಮನೆ ಕಟ್ಟಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಯ 30*40 ಸೈಟಿನಲ್ಲಿ 3 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. 1 ನೇ ಪ್ರತಿವಾದಿಗೆ ನಮ್ಮ

ಊರಿನಲ್ಲಿ 15*20 ಹಳೆಯ ಮನೆ ಇದೆ ಎಂದರೆ ಸರಿ. 1 ನೇ ಪ್ರತಿವಾದಿಯೊಂದಿಗೆ ಒಡಹುಟ್ಟಿದವರು 3 ಜನ. ಹಳೆಯ ಮನೆಯಲ್ಲಿ 1 ನೇ ಪ್ರತಿವಾದಿಯ ತಮ್ಮಂದಿರು ವಾಸವಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ 17*40 ರಲ್ಲಿ 17*30 ಮನೆ ಕಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು 1 ನೇ ಪ್ರತಿವಾದಿಗಳಿಗೆ ಬಡವರು ಎಂದು ಹೇಳಿ ಸರ್ಕಾರದಿಂದ ಮಂಜುರೂ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಗಳು ವಾದಿಯ 3 ಅಡಿ ಸ್ವತ್ತನ್ನು ಒತ್ತುವರಿ ಮಾಡಿ ಕಟ್ಟಿರುತ್ತಾರೆ ಎನ್ನುವರು.

ಪ್ರತಿವಾದಿಗಳು ನಮ್ಮ ಊರಿನಲ್ಲಿ ಬಟ್ಟೆ ಶುದ್ದಿ ಮಾಡಿಕೊಂಡು ಕೂಲಿ ಮಾಡಿಕೊಂಡು ಇದ್ದಾರೇ ಎಂದರೆ ಸರಿ. ವಾದಿಗಳು ಟ್ರಾಕ್ಟರನ್ನು ಹೊಂದಿದ್ದು ತಿಂಗಳ ಬಾಡಿಗೆಗೆ ಹೋಗುತ್ತಾರೆ ಎಂದರೆ ಸರಿ. ಅದೇ ರೀತಿ ವಾದಿ ನಂಜನಗೂಡಿನಲ್ಲಿ ಮನೆ ಕಟ್ಟಿ ಮಾರುವ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆ ಸಣ್ಣಶೆಟ್ಟಿ ದ್ಯಾವಾಸನಹಳ್ಳಿಯಲ್ಲಿ ಕೂಲಿ ಮಾಡುತ್ತಿದ್ದರು ಎಂದರೆ ಸರಿ. ಇನ್ನೊಬ್ಬರ ಮನೆಯಲ್ಲಿ ಜೀತ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ವ್ಯವಸಾಯ ಮಾಡಲು ಬೇರೆ ಯಾವುದೇ ಜಮೀನು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಬಡವರಿಗೆ ಪಂಚಾಯ್ತಿಯಿಂದ ಸೈಟನ್ನು ಯಾವ ಸಾಲಿನಲ್ಲಿ ಹಂಚಿಕೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟಸ್ವಾಮಿಗೌಡ, ಪಾಪೇಗೌಡ, ರಾಮೇಗೌಡರು ನಮ್ಮೂರಿನ ಚೇರಮೆನ್ ರಾಗಿದ್ದು, ದೇವರಸಹಳ್ಳಿಯ ಸಣ್ಣಪ್ಪ ಮೆಂಬರ್ ಆಗಿದ್ದರು. ಇವರೆಲ್ಲರು ಸೇರಿ ನ್ಯಾಯ ಯೂತವಾಗಿ ಬಡವರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ ಎಂದರೆ ಸರಿ. ಸದರಿ ನಿವೇಶನಗಳನ್ನು ಹಂಚಿಕೆ ಮಾಡುವಾಗ ನನಗೆ ತಿಳಿದಿರಲಿಲ್ಲ.

ಮೊದಲು ದಾವಾ ಸ್ವತ್ತಿನಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವ ಸಮಯದಲ್ಲಿ 4-5 ಜನ ಗುಡಿಸಲು ಹಾಕಿಕೊಂಡು ವಾಸವಿದ್ದರು ಎಂದರೆ ಸರಿ. ಇದೇ ರೀತಿ ದಾವಾ ಸ್ವತ್ತಿನಲ್ಲಿ ವಾದಿಯ ಅಣ್ಣ ಬಸವರಾಜು ಗುಡಿಸಲು ಹಾಕಿಕೊಂಡಿದ್ದರು ಎಂದರೆ ಸರಿ. ಅದೇ ರೀತಿ ಬಸಮ್ಮ ನಂಜೇಗೌಡರು ಮಂಡಿ ಮಾದಪ್ಪನ

ಬಸವಯ್ಯ ಹಾಗೂ ಪ್ರತಿವಾದಿಯ ತಂದೆ ಸಣ್ಣಶೆಟ್ಟಿ ಗುಡಿಸಲು ಹಾಕಿಕೊಂಡು ವಾಸವಿದ್ದರು ಎಂದರೆ ಸರಿ. ಇತ್ತೀಚೆಗೆ ಅಂದರೆ 2000 ರಿಂದ ಅಲ್ಲಿ ಮನೆಗಳು ಅಧಿಕವಾಗಿದೆ ಎಂದರೆ ಸರಿ. ಅದೇ ರೀತಿ 1 ನೇ ಪ್ರತಿವಾದಿ ಗ್ರಾಮ ಪಂಚಾಯ್ತಿಯಿಂದ ಅನುದಾನ ನೀಡಿದ ನಂತರ ದಾವಾ ಸ್ವತ್ತಿನಲ್ಲಿ ಹಂಚಿನ ಮನೆಯನ್ನು ನಿರ್ಮಿಸಿಕೊಂಡಿದ್ದರು ಎಂದರೆ ಸರಿ. ಅದಾದ ನಂತರ ಸದರಿ ಸ್ವತ್ತು 2 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆದ ಮೇಲೆ ಶೀಟಿನ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಸದರಿ ಮನೆಗೆ ಗ್ರಾಮಪಂಚಾಯ್ತಿ ಮತ್ತು ಮಂಡಲ ಪಂಚಾಯ್ತಿಯಿಂದ ಅನುದಾನ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ವಾದಿಗಳು ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ವಾದಿಯ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡಿದ್ದಾನೆ ಎನ್ನುವುದನ್ನು ನಾನು ದಾಖಲೆಗಳನ್ನು ನೋಡಿ ಹೇಳುತ್ತಿದ್ದೇನೆ. ನಾನು ದಾಖಲೆಗಳನ್ನು ಸುಮಾರು 7-8 ವರ್ಷಗಳ ಹಿಂದೆ ನೋಡಿದ್ದೇನೆ. ವಾದಿಗಳು ಪಂಚಾಯ್ತಿಗೆ ದೂರನ್ನು 7-8 ವರ್ಷಗಳ ಹಿಂದೆ ನೀಡಿದ್ದ ಸಮಯದಲ್ಲಿ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ದೂರಿಗೆ ಗ್ರಾಮ ಪಂಚಾಯ್ತಿಯವರು ಪ್ರತಿವಾದಿಗಳು ಪಂಚಾಯ್ತಿಗೆ ಬರುವುದಿಲ್ಲವಂತೆ ಹಾಗಾಗಿ ನೀವು ನ್ಯಾಯಾಲಯಕ್ಕೆ ಹೋಗುವಂತೆ ವಾದಿಗಳಿಗೆ ತಿಳಿಸಿರುತ್ತಾರೆ.

ದಾವಾ ಸ್ವತ್ತಿನ ಚೆಕ್ಕುಬಂದಿಯ ದಿಕ್ಕುಗಳನ್ನು ಹೇಳಲು ನನಗೆ ಬರುವುದಿಲ್ಲ. ವಾದಿಗಳಿಗೆ ನೀಡಿರುವ ಹಕ್ಕುಪತ್ರಗಳನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ವಾದಿಗಳಿಗೆ ನೀಡಿರುವ ಹಕ್ಕು ಪತ್ರ ಎಂದು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ನಾನು 3 ನೇ ತರಗತಿಯವರೆಗೆ ವ್ಯಾಸಂಗ ಮಾಡಿಕೊಂಡಿದ್ದು ನನಗೆ ಓದಲು ಬರುವುದಿಲ್ಲ. ನಿಪಿ-1 ನ್ನು ವಾದಿಗಳು ಸೃಷ್ಟಿಸಿಕೊಂಡಿರುವ ಪತ್ರ ಎಂದರೆ ಸರಿಯಲ್ಲ. ವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧಿನದಲ್ಲಿ ಇಲ್ಲ ಹಾಗೂ ಹಕ್ಕುಪತ್ರದ ನಿಯಮದ ಪ್ರಕಾರ ದಾವಾ ಸ್ವತ್ತನ್ನು ಪಡೆಯಲು ಅವರು ಅರ್ಹರಲ್ಲ ಎಂದರೆ ಸರಿಯಲ್ಲ. ಜಿಲ್ಲಾ

ಪಂಚಾಯ್ತಿ ಮತ್ತು ಗ್ರಾಮ ಪಂಚಾಯ್ತಿಯವರು ಸ್ಥಳ ಪರೀಶಿಲನೆ ಮಾಡಿ ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೇ ವಾಸವಿದ್ದಾರೆ ಎಂದು ವರದಿ ನೀಡಿದ್ದು ಅದು ನ್ಯಾಯಾಲಯದ ಮುಂದೆ ಇದೆ ಎಂದರೆ ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**